ದಿನಾಂಕಃ **06.06.2025** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಎನ್.ವಿ.ಪಿ. ಅರ್ಜಿದಾರರ ಪರ ವಕೀಲರಿಂದಃ

ಮಾಹಿತಿ ಹಕ್ಕು ಅಧಿನಿಯಮದ ಪ್ರಕಾರವಾಗಿ ದಿಃ 18.02.2025 ರಂದು ಅಧಿಕಾರಿಗಳು ನೀಡಿರುವ ಹಿಂಬರಹವನ್ನು ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ - 14 ಎಂದು, ಸದರಿ ಹಿಂಬರಹವು ಅಂಚೆ ಮೂಲಕ ಬಂದಿರುವುದನ್ನು ತೋರಿಸಲು ಹಾಜರುಪಡಿಸಿರುವ ಅಂಚೆ ಲಕೋಟೆಯನ್ನು ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ -15 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ ಆರ್.ಹೆಚ್. 2 ನೇ ಎದುರುದಾರರ ಪರ ವಕೀಲರಿಂದಃ

ನಾನು ಈ ದಿನ ಹಾಜರುಪಡಿಸಿದ ದಾಖಲೆಗಳು ವಾಹನವು ಅಶ್ವಿತ್ ಶೆಟ್ಟಿ ಅವರ ಹೆಸರಿನಲ್ಲಿತ್ತು ಎದು ತೋರಿಸಲು ಹಾಜರುಪಡಿಸಿದ್ದೇನೆ. ಈಗ ಸದರಿ ವಾಹನವನ್ನು ಹರೀಶ್ ರವರಿಗೆ ಮಾರಾಟ ಮಾಡಿದ್ದೇವೆ. ಅದರ ಬಗ್ಗೆ ದಾಖಲೆಗಳು ಇರುತ್ತದೆ. ನನ್ನ ತಮ್ಮ ಸದರಿ ವಾಹನದಲ್ಲಿ ಗೂಡ್ಸ್ ಗಳನ್ನು ಬಾಡಿಗೆಗೆ ಸಾಗಿಸುತ್ತಿದ್ದರು. ಹಾಗೆ ಬಾಡಿಗೆ ಮಾಡುತ್ತಿದ್ದರು ಎಂದು ತೋರಿಸಲು

ನನ್ನ ಬಳಿ ದಾಖಲೆಗಳು ಇದೆ. ಸದರಿ ವಾಹನಕ್ಕೆ ಸಾಲ ಪಡೆದಿದ್ದೇವೆ. ಆದ್ದರಿಂದ ಅದನ್ನು ಮಾರಾಟ ಮಾಡಲಾಗಿದೆ. ನನ್ನ ತಮ್ಮನಿಗೆ ಬ್ಯಾಂಕ್‌ನಲ್ಲಿ ಇತ್ತೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ವಾಹನದ ಬಗ್ಗೆ ಸಾಲವನ್ನು ಮಂಗಳೂರಿನ ಎಲ್.ಎನ್.ಟಿ. ಫೈನಾನ್ಸ್ ನಲ್ಲಿ ಪಡೆದಿದ್ದೇವೆ. ಸದರಿ ದಾಖಲೆಗಳನ್ನು ಹಾಜರಪಡಿಸಬಹುದು.

ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದು, ನನಗೆ ಈಗ ಯಾವುದೇ ಕೆಲಸ ಇರುವುದಿಲ್ಲ. ನನಗೆ ಈಗ 36 ವರ್ಷ ಆಗಿದ್ದು, ನಾನು ಮದುವೆಯಾಗಿರುವುದಿಲ್ಲ. ಮೊದಲು ವಯರಿಂಗ್ ಕೆಲಸಕ್ಕೆ ಹೋಗುತ್ತಿದ್ದು, ಈಗಲೂ ಹೋಗುತ್ತಿದ್ದೇನೆ.

ನಾನು ಅಪಘಾತವನ್ನು ನೋಡಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ಅನುಭವ ಮಾಡಿಕೊಂಡಿದ್ದೇನೆ. ದಾಖಲೆಗಳನ್ನು ನನಗೆ ತೋರಿಸಿದ್ದು, ನನಗೆ ಅರ್ಥ ಆಗಿರುವುದಿಲ್ಲ. ಅಪಘಾತವನ್ನು ನೋಡಿದವರ ಸಾಕ್ಷಿ ವಿಚಾರಣೆ ಮಾಡಿಸಬಹುದು. ಅಪಘಾತವಾದ ಸಮಯದಲ್ಲಿ ನನ್ನ ಸಹೋದರ ಕಾರ್ಕಳದಿದ ಮಂಗಳೂರಿನ ಕಡೆಗೆ ಹೋಗುತ್ತಿದ್ದರು. ಈಗ್ಗ ನನಗೆ ನಕಾಶೆ ತೋರಿಸಿದ್ದು, ಅಪಘಾತವು ಕಾರ್ಕಳದಿಂದ ಮಂಗಳೂರಿಗೆ ಹೋಗುವ ಬಲಬದಿಯಲ್ಲಿ ಆಗಿರುವುದು ಕಂಡು ಬರುತ್ತದೆ ಎಂದರೆ ಸರಿ . ಆದರೆ ನನ್ನ ಸಹೋದರ ಬರುತ್ತಿದ್ದ ಬಸ್ಸನ್ನು ತಪ್ಪಿಸುವ ಸಲುವಾಗಿ ಬಲಬದಿಗೆ ಹೋಗಿದ್ದು, ಅಪಘಾತವಾಗಿರುತ್ತದೆ. ಎದುರುದಾರರ ವಾಹನವು ಪಡುಬಿದ್ರಿ ಯಿಂದ

ಕಾರ್ಕಳಕ್ಕೆ ಬರುವ ಎಡಬದಿಯಲ್ಲಿ ಸರಿಯಾಗಿ ವಾಹನವನ್ನು ಚಲಾಯಿಸುತ್ತಿದ್ದು, ನನ್ನ ಸಹೋದರ ತಪ್ಪು ದಿಕ್ಕಿನಲ್ಲಿ ಹೋದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ಇಬ್ಬರ ತಪ್ಪಿನಿಂದಲೂ ಆಗಿರುತ್ತದೆ ಎಂದು ಪೋಲೀಸರು ಅಂತಿಮ ವರದಿ ಸಲ್ಲಿಸಿರುವ ವಿಚಾರ ನನಗೆ ತಿಳಿದಿದೆ. ನಾನು ಅಂತಿಮ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಈಗ ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದ ಅಂತಿಮ ವರದಿಯನ್ನು ತೋರಿಸಿದ್ದು, ಅದನ್ನು ನಾನು ಒಪ್ಪುವುದಿಲ್ಲ. ಆದರೆ ನನ್ನ ಬಳಿ ಅಂತಿಮ ವರದಿ ಇರುವುದಿಲ್ಲ. ಈ ಪ್ರಕರಣದಲ್ಲಿ ಅಂತಿಮ ವರದಿ ಸಲ್ಲಿಸಿದ್ದಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನಾನು ಅಂತಿಮ ವರದಿ ಪಡೆಯಲು ಅರ್ಜಿ ಸಲ್ಲಿಸಿರುವುದಿಲ್ಲ. ನಾನು ಅಂತಿಮ ವರದಿಯನ್ನು ಹಾಜರುಪಡಿಸದೇ ಇದ್ದಲ್ಲಿ, ಪರಿಹಾರ ಪಡೆಯಲು ನನಗೆ ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ. ಬಸ್ಸು ಚಾಲಕನ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇರುವುದಿಲ್ಲ. ನನ್ನ ತಮ್ಮನ ತಪ್ಪಿನಿಂದ ಅಪಘಾತವಾಗಿದ್ದು, ಇದರಲ್ಲಿ ಬಸ್ಸು ಚಾಲಕನ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತಹ ಕ್ರಿಮಿನಲ್ ಪ್ರಕರಣದಲ್ಲಿ ಸಲ್ಲಿಸಿರುವ ಅಂತಿಮ ವರದಿಯನ್ನು ಪಡೆದು ಹಾಜರಪಡಿಸಬಹುದು. ನ್ಯಾಯಾಲಯದಿಂದ ಸದರಿ ಅಂತಿಮ ವರದಿಯನ್ನು ಪಡೆಯಲು ನಾನು ಅರ್ಜಿ ಸಲ್ಲಿಸಿರುವುದಿಲ್ಲ.

ನನ್ನ ತಾಯಿ ಮನೆಯಲ್ಲಿದ್ದಾರೆ. ನಾನು ಮೃತ ವ್ಯಕ್ತಿಗೆ ಅಣ್ಣ. ನಾನು ವಯಸ್ಕರಾಗಿರುವುದರಿಂದ ಮತ್ತು ಕೆಲಸ ಮಾಡಲು ಅರ್ಹನಾಗಿರುವುದರಿಂದ

ಮತ್ತು ಕೆಲಸ ಮಾಡುತ್ತಿರುವುದರಿಂದ ನಾನು ಈ ಪ್ರಕರಣದಲ್ಲಿ ಪರಿಹಾರ ಕೇಳಲು ಬಾಧ್ಯನಲ್ಲ ಎಂದರೆ ಸರಿಯಲ್ಲ. ನಾನು ಬಸ್ಸಿನ ಚಾಲಕನ ಡಿಎಲ್, ವಾಹನದ ಪರ್ಮಿಟ್, ಆರ್.ಸಿ ಮತ್ತು ಇತರೆ ದಾಖಲೆಗಳನ್ನು ನೋಡಿದ್ದೇನೆ. ಬಸ್ಸನ್ನು ಚಲಾಯಿಸಲು ಬಸ್ಸು ಚಾಲಕನಿಗೆ ಪರವಾನಿಗೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮರಣೋತ್ತರ ಕ್ರಿಯೆಗಳಿಗೆ ಹಣ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದು, ನಾನು ಅಷ್ಟು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನಾಗಲೀ ಅಥವಾ ನನ್ನ ತಾಯಿಯಾಗಲೀ ಈ ಪ್ರಕರಣದಲ್ಲಿ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ,

ಕಾರ್ಕಳ